ಅವಳು ಹಿಂದೆ ಪ್ರೇಮಿಸಿ ಆರಾಧಿಸಿದ, ಕಾಣಲು ಹಪಹಪಿಸಿದ ಪ್ರಕಾಶ ಕೊನೆಗೂ ಬಂದ. ಆದರೆ ತಡವಾಗಿತ್ತು. ಹೂವಿನ ಒಳಗೆಲ್ಲ ಹುಳ ಹಿಡಿದಿತ್ತು. ಅವಳ ಖ್ಯಾತಿ ಅವನನ್ನೂ ತಲುಪಿತ್ತು. ಸಂತಸ, ಅಚ್ಚರಿ, ಅಳುಕುಗಳನ್ನು ತುಂಬಿಕೊಂಡೇ ಅವಳನ್ನು ಭೇಟಿಯಾಗಲು ಕಾಯ್ದಿದ್ದ. ಸೌದಾಮಿನಿ ಅವನನ್ನು ನೋಡಲೂ ನಿರಾಕರಿಸಿದಳು. ಆಂಜನಪ್ಪ ಹೇಳಿದ ಮೇಲೂ, "ಈಗ ಟೈಮಿಲ್ಲ ಮಾವ, ಆಮೇಲೆ ನೋಡೋಣ" ಎಂದು ಬಿಟ್ಟಳು. ಕೋಣೆಯ ಹೊರಗೆ ಕಾಯುತ್ತಿದ್ದವನ ಕಂಗಳು ನೀರಾಡಿದ್ದವು. ಆಸೆಯ ಬೆಟ್ಟ ಹೊತ್ತು ಬಂದವನಿಗೆ ಅಗಾಧ ನಿರಾಸೆ. ಖ್ಯಾತ ತಾರೆ, ತನ್ನಂಥವನನ್ನು ಕಣ್ಣೆತ್ತಿ ನೋಡಲಿಕ್ಕಿಲ್ಲ ಎಂದು ಅಳುಕಿದ್ದು ನಿಜವಾಗಿತ್ತು. ಎಲ್ಲಿಗೋ ದೂರ ಹೊರಟುಬಿಡಲು ಯೋಚಿಸಿದರೂ ಮನದ ಮೂಲೆಯಲ್ಲೆಲ್ಲೋ ಮಿನುಗಿದ ಆಸೆ ತಡೆದಿತ್ತು. ಆಂಜನಪ್ಪನನ್ನು ಬೇಡಿ ಅಲ್ಲಿಯೇ ಡ್ರೈವರ್ ಕೆಲಸ ಗಿಟ್ಟಿಸಿಕೊಂಡಿದ್ದ. ತನ್ನ ಪ್ರೀತಿಯನ್ನು ದೂರದಿಂದಲಾದರೂ ನೋಡಬಹುದಲ್ಲ ಎಂದು. ಅದೃಷ್ಟ ಜತೆಯಾದರೆ ಮುಂದೊಂದು ದಿನ ಮಾತನಾಡಿಸಲೂಬಹುದು. ಅವಳ ಕದಡಿದ ಅಂತರಂಗದ ಅರಿವಿಲ್ಲದೇ ಕನಸಿನ ಗೋಪುರ ಕಟ್ಟಿಕೊಂಡ.

ನಾಗುವನ್ನು ಕಾಯಿಸುವ ಮನ ಪ್ರಕಾಶನಿಗೂ ಇರಲಿಲ್ಲ. ಆದರೆ ಪರಿಸ್ಥಿತಿ ವಿಪರೀತವಾಗಿತ್ತು. ಹಾಸಿಗೆ ಹಿಡಿದ ಅಪ್ಪ ದಿನದಿನಕ್ಕೂ ನವೆಯತೊಡಗಿದ. ಧಣಿಗಳ ಮನೆಯ ಕೆಲಸದ ಹೊರೆಯ ಜೊತೆ ಅಪ್ಪನ ಕಾಯಿಲೆ. ನೋಡಿಕೊಳ್ಳುವರಾರೂ ಇಲ್ಲ. ಡಾಕ್ಟ್ರು, ಔಷಧಿ ಎಂದು ಓಡಾಡಿದ್ದೆಲ್ಲ ವ್ಯರ್ಥವಾಯಿತು. ಕೂಡಿಟ್ಟ ಕೊಂಚ ಕಾಸು ಕರಗಿ ಹೋಯಿತು. ನಾಗುವಿನ ಪತ್ರಗಳೆಲ್ಲ ತಲುಪಿದ್ದು ಧಣಿಗಳ ಮನೆಗೆ. ಅವರ ಮಕ್ಕಳ ಕೈಲಿ ಹರಿದು ಚೂರಾದವು. ಎರಡು ವರ್ಷಗಳವರೆಗೆ ಒದ್ದಾಡಿ ಒಂದಷ್ಟು ಸಾಲದ ಹೊರೆ ಮಗನ ತಲೆ ಮೇಲೆ ಹೊರಿಸಿ ಕೊನೆಗೂ ಅಪ್ಪ ಇಹಲೋಕ ತ್ಯಜಿಸಿದ. ಇತ್ತ ಅಪ್ಪನನ್ನು ಕಳೆದುಕೊಂಡವ ಅತ್ತ ನಾಗುವನ್ನೂ ಕಳೆದುಕೊಂಡಿದ್ದ. ಸಾಲದಲ್ಲಿ ಕೊಂಚ ರಿಯಾಯಿತಿ ತೋರಲು ಧಣಿಗಳಲ್ಲಿ ಕೇಳಿದಾಗ ಮರುಕವಿಲ್ಲದೇ ಬಾರಿಸಿದ್ದರು. ಮೊದಲ ಬಾರಿ ಕೆರಳಿದ್ದ. ದುಡಿದದ್ದಕ್ಕೆ ಲೆಕ್ಕವಿಡದೇ ಸಾಲಕ್ಕೆ ಮಾತ್ರ ಲೆಕ್ಕ ಬಂದಿತ್ತು. ಹೇಳದೇ ಕೇಳದೇ ಊರು ಬಿಟ್ಟು ಮದ್ರಾಸಿಗೆ ಬಂದಿಳಿದಿದ್ದ. ಸೌದಾಮಿನಿಯ ಹೆಸರು ಹೇಳುತ್ತ... ಆಂಜನಪ್ಪನ ಸಂಬಂಧಿ ಎನ್ನುತ್ತ ಸ್ಟುಡಿಯೋದೊಳಗೆ ಅಡಿ ಇರಿಸಿದ್ದ. ತಡವಾಗಿ.

ದಿನಗಳು ಓಡಿದಂತೆ ಆರ್ಮುಗಂನ ಖಾಸಾ ಬಂಟರಲ್ಲಿ ಪ್ರಕಾಶ ಒಬ್ಬನಾದ. ತನ್ನ ನಾಗುವಿನ ವ್ಯಾಪಾರವಾಗುತ್ತಿರುವದು ಅರಿವಿಗೆ ಬಂದು ಔಡುಗಚ್ಚಿದ. ಕನಸಿನ ಗೋಪುರ ಕಟ್ಟಿಕೊಂಡು ಅಲ್ಲಿಂದ ಓಡಿ ಬಂದಿದ್ದು ವ್ಯರ್ಥವೆನಿಸಿದ್ದು ಸುಳ್ಳಲ್ಲ. ಹೃದಯ ಹೊತ್ತಿ ಉರಿಯಿತು. ಅದರ ಬಗ್ಗೆ ಅವಳಲ್ಲಿ ಮಾತನಾಡಲೆತ್ನಿಸಿ ಸೋತ. ಅವಳು ನಾಗುವಲ್ಲ... ಸೌದಾಮಿನಿಯಾಗಿದ್ದಳಲ್ಲ. ಅವನ ಆಶಾಭಾವ ಕೊನೆಯಾಯಿತು. ಮುಂದೇನು ಮಾಡಲು ತಿಳಿಯದೇ ತಳಮಳಿಸಿದ. ಆಗಲೇ ಊಟಿಯ ಶೂಟಿಂಗ್ ಫಿಕ್ಸ್ ಆಯಿತು. ಊಟಿಗೆ ಹೊರಟಾಗಲೇ ಸೌದಾಮಿನಿಯ ಕಾರು ಆ್ಯಕ್ಸಿಡೆಂಟ್ ಆಗಿದ್ದು... ಅವಳು ನುಜ್ಜುಗುಜ್ಜಾಗಿ ಮಡಿದದ್ದು... ಜಗತ್ತಿಗೇ ಗೊತ್ತಿದ್ದ ಕಥೆ" ಎಂದು ನಿಲ್ಲಿಸಿ ಮೌನವಾದಳು. ಕಂಗಳು ಕೊಳಗಳಾಗಿದ್ದವು.

ಸುಭದ್ರಮ್ಮ ನಿಡಿದಾಗಿ ಉಸಿರು ಬಿಟ್ಟು, "ಪಾಪ! ಎಷ್ಟು ಕರುಣಾಜನಕವಾಗಿದೆ ನೋಡು. ನಮಗೆ ಕಾಣುವದು ರಜತ ಪರದೆಯ ಥಳಕು ಬಳಕುಗಳಷ್ಟೇ. ಒಳಗಿನ ಹುಳುಕಿನ ನೂರೆಂಟು ಕತೆಗಳನ್ನು ಬಲ್ಲವರಾರು? ಆದರೂ ನಿನಗೆ ಎಷ್ಟು ವಿವರವಾಗಿ ಗೊತ್ತಿದೆಯಲ್ಲ. ಹೋಗಲಿ... ಆ